ಕನ್ನಡಪ್ರಭ

**Tuesday 17th May 2022, Page No.04**

**Dr. M. P. Shyam selected as RV Trust President**

# ಆರ್.ವಿ.ಟ್ರಸ್ಟ್ ಅಧ್ಯಕ್ಷರಾಗಿ ಎಂ.ಪಿ.ಶ್ಯಾಮ್ ಆಯ್ಕೆ

**ಬೆಂಗಳೂರು:** ಪ್ರಖ್ಯಾತ ಉದ್ಯಮ ಎಂ.ಪಿ. ಶ್ಯಾಮ್(61), ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್‌ನ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಇದು



ಹಳೆಯ ಶೈಕ್ಷಣಿಕ ಟ್ರಸ್ಟ್‌ಗಳಲ್ಲೊಂದಾಗಿದ್ದು, ಆರ್.ವಿ. ಸಮೂಹ ಶಿಕ್ಷಣ ಸಂಸ್ಥೆಗಳನ್ನು ನಿರ್ವಹಿಸುತ್ತಿದೆ. ಬೆಂಗಳೂರಿನಲ್ಲಿ ಆರ್‌ವಿ ವಿಶ್ವವಿದ್ಯಾಲಯ ಎಂದೇ ಹೆಸರಾಗಿದೆ. ಟ್ರಸ್ಟ್ ಸದಸ್ಯರ ಸಭೆಯಲ್ಲಿ ಅವಿರೋಧವಾಗಿ ಎಂ.ಪಿ.ಶ್ಯಾಮ್ ಅವರನ್ನು ಅಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು. ಶ್ಯಾಮ್ ಅವರು ಅವರ ತಂದೆ, ಹಿರಿಯ ಶಿಕ್ಷಣವಾದಿ ಎಂ.ಕೆ.ಪಾಂಡುರಂಗ ಅವರ ಉತ್ತರಾಧಿಕಾರಿಯಾಗಿದ್ದಾರೆ. ಈ ಟ್ರಸ್ಟ್ 1940ರಲ್ಲಿ ಸ್ವಾತಂತ್ರ್ಯ ಹೋರಾಟಗಾರ ಎಂ.ಸಿ.ಶಿವಾನಂದ ಶರ್ಮಾ ಅವರಿಂದ ಸ್ಥಾಪಿಸಲ್ಪಟ್ಟಿತು. ಬೆಂಗಳೂರಿನಲ್ಲಿ 6 ವಿದ್ಯಾರ್ಥಿಗಳೊಂದಿಗೆ ಆರಂಭವಾದ ಆರ್‌ವಿ ಶಿಕ್ಷಣ ಸಂಸ್ಥೆ ಇಂದು 20ಕ್ಕೂ ಹೆಚ್ಚು ಶಾಲಾ ಕಾಲೇಜುಗಳನ್ನು ನಿರ್ವಹಿಸುತ್ತಿದೆ. ಇದರಲ್ಲಿ ಎಂಜಿನಿಯರಿಂಗ್, ಡೆಂಟಲ್ ಕಾಲೇಜುಗಳನ್ನೂ ಒಳಗೊಂಡಿದ್ದು, 20 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಒಳಗೊಂಡಿದೆ. ಅಮೆರಿಕದಲ್ಲಿ ವಿದ್ಯಾಭ್ಯಾಸ ಮಾಡಿರುವ ಶ್ಯಾಮ್ ಅವರು, ಲಾಜಿಸ್ಟಿಕ್ ವಿಚಾರದಲ್ಲಿ ಡಾಕ್ಟರೇಟ್ ಪಡೆದಿದ್ದಾರೆ. ಹಿರಿಯ ಆಟೋಮೊಬೈಲ್ ಡೀಲರ್ ಆಗಿದ್ದಾರೆ. ಕರ್ನಾಟಕ ಫೆಡರೇಷನ್ ಆಫ್ ಆಟೋ ಡೀಲರ್ ಅಸೋಸಿಯೇಷನ್‌ನ ಮುಖ್ಯಸ್ಥರೂ ಆಗಿದ್ದಾರೆ.